ವೋಟೂ ಬಂದಿಲ್ಲ. ದೀವ್ರೆಲ್ಲ ದೇವ್ರು ಅನ್ಕಂಡು ಬಾಲಕೃಷ್ಣಂಗೆ ಓಟು ಹಾಕಿರದು ನಂಗೇನೂ ಗೊತ್ತಿಲ್ಲ ಅನ್ಕಂಡ್ರ... ಅವ್ರುನತ್ರನೇ ಮಾಡುಸ್ಕಹೋಗಿ, ಅದೆಂಗೆ ಮಾಡುಸ್ಕಂತೀರೋ ನಾನೂ ನೋಡ್ತೀನಿ...' ಎಂದು ಧಮಕಿ ಹಾಕಿ ಕಳಿಸಿದ. ಯಾರು ಯಾರು ಕದ್ದು ಬಾಲಕೃಷ್ಣನಿಗೆ ಓಟು ಹಾಕಿದರೋ ಗೊತ್ತಾಗದೇ ಮುಖಮುಖ ನೋಡಿಕೊಂಡು ಗುಸುಗುಡುತ್ತ ಬುಸುಗುಟ್ಟುತ್ತ ಬಂದ ದಾರಿಗೆ ಸುಂಕವಿಲ್ಲವೆಂದು ಹಿಂದಿರುಗಿದರು. ಯಥಾರೀತಿ ನಾಲ್ಕೈದು ಜನ ಹೋಗುವುದು, ಒಬ್ಬ ತೆಪ್ಪವನ್ನು ಮತ್ತೆ ಹಿಂದಿರುಗಿ ತರುವುದು, ಮತ್ತೆ ನಾಲ್ಕೈದು ಜನ ಆ ದಡ ತಲುಪುವುದು... ಹೀಗೇ ಮಾಡಿಕೊಂಡು ಅಂತೂ ಊರು ತಲುಪಿದರು. ತಲುಪಿದವರು, ಹೊಳೆಬಾಗಿಲಲ್ಲಿ ಕೆಟ್ಟುನಿಂತಿರುವ ಹಳೆಯ ಸಣ್ಣಲಾಂಚನ್ನು ಸಂಬಂಧಪಟ್ಟ ಅಧಿಕಾರಿಗೆ ತಾವೇ ಹೋಗಿ ದುಂಬಾಲು ಬಿದ್ದು ಮಂಜೂರು ಮಾಡಿಸಿಕೊಳ್ಳುವುದೆಂದು ನಿರ್ಧರಿಸಿದರು. ಆದರೆ ಯಾರಿಗೆ ಕಾಣಬೇಕು?

ಇವರಿಗೆ, ಎಂಬಲ್ಲಿ ... ... ಎಂದು ಖಾಲಿ ಜಾಗ ಬಿಟ್ಟುಕೊಂಡು ಅರ್ಜಿ ಬರೆಯಲು ನಿರ್ಧರಿಸಿದರು. ಸಾಗರಕ್ಕೆ ಹೋಗಿ ಡಿ'ಸೋಜ ಅವರ ಬಳಿ ತಮ್ಮ ಹತ್ತಾರು ವರ್ಷಗಳ ಬವಣೆಯನ್ನು ಕಣ್ಣಿಗೆ ಕಟ್ಟುವಂತೆ ಬರೆಸಿಕೊಂಡು, ಟೈಪು ಮಾಡಿಸಿಕೊಂಡು ಬಂದು ಊರಿನ ನೂರಾರು ಜನರ ಸಹಿ ಮಾಡಿಸಿಕೊಂಡರು. ಅದರ ನಲವತ್ತೈವತ್ತು ಕಾಪಿಗಳನ್ನು ಝೆರಾಕ್ಸ್ ಮಾಡಿಸಿಕೊಂಡು, ಕಂಡಕಂಡವರನ್ನೆಲ್ಲ ಕಂಡು, ತಮ್ಮ ಸಂಕಟವನ್ನು ನಿವೇದಿಸಿಕೊಂಡು ಅರ್ಜಿ ಕೊಡಲಾರಂಭಿಸಿದರು. ಆ ಎಂಪಿ, ಈ ಎಂಎಲ್‌ಎ, ಆ ಮಂತ್ರಿ, ಈ ಮಿನಿಷ್ಟರ್ರು, ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿ ಎಂದೆಲ್ಲ ತಾಲ್ಲೂಕಾಫೀಸು, ಸರ್ಕಿಟ್ ಹೌಸೂ, ಡಿ.ಸಿ. ಕಚೇರಿ, ವಿಧಾನಸೌಧಗಳನ್ನೆಲ್ಲ ಅಲೆದಾಡಲಾರಂಭಿಸಿದರು. ಎಲ್ಲರೂ ಆಯ್ತು, ನೋಡ್ತೀನಿ, ಮಾಡ್ತೀನಿ ಅಂದರೇ ಹೊರತು, ಆಗಲ್ಲ ಎಂದು ಯಾರೊಬ್ಬರೂ ಬಾಯಿಬಿಟ್ಟು ಅನ್ನಲಿಲ್ಲ. ಆದರೆ ಯಾರೂ ಮಾಡಿಕೊಡಲಿಲ್ಲ.

ಹೊಳೆಬಾಗಿಲಿನ ಮುಖ್ಯ ಲಾಂಚೂ ರಿಪೇರಿಗೊಂಡು ಮೂರು ದಿನ ನಿಂತುಬಿಟ್ಟಾಗ ಜನಜೀವನ ಸ್ತಬ್ಧವಾಯಿತೆಂದು ಕೂಡಲೇ ರಿಪೇರಿಗಾರರನ್ನು ಕರೆಸಿ ರಿಪೇರಿ ಮಾಡಿಸಿದರು. ಅದಕ್ಕೆ ಯಾರು ಆದೇಶ ಕೊಡುತ್ತಾರೋ, ಯಾರು ಹಣ ಕೊಡುತ್ತಾರೋ ಯಾರು ಬಲ್ಲರು. ಆದರೆ ಯುವಕ ಸಂಘದ ಸದಸ್ಯರು ಆ ರಿಪೇರಿಗಾರನನ್ನೇ ಹಿಡಿದರು. ಪಕ್ಕದಲ್ಲಿ ಕೆಟ್ಟು ನಿಂತಿರುವ ಸಣ್ಣ ಲಾಂಚನ್ನೂ ರಿಪೇರಿ ಮಾಡಿಕೊಡುವಂತೆ ಕೋರಿದರು. ಆತ ಏನೇನೋ ನೆಪಗಳನ್ನು ಹೇಳಿದರೂ ಕೇಳದೇ, ಅದರ ಖರ್ಚನ್ನು ತಾವೇ ಹೊಂಚಿಕೊಡುವುದಾಗಿ ಭರವಸೆ ನೀಡಿದರು. ಆತ ದುಡ್ಡು ಪಡೆದು ರಿಪೇರಿಯೇನೋ ಮಾಡಿಕೊಟ್ಟ. ಆದರೆ ಆಮೇಲೆ 'ಅನುಮತಿಯಿಲ್ಲದೆ ಹಾಗೆಲ್ಲ ಬಳಸುವಂತಿಲ್ಲ, ಏನಾದರೂ ಹೆಚ್ಚು ಕಡಿಮೆ ಆಗಿ ಪ್ರಾಣಾಪಾಯ ಆಯ್ತು ಎಂದ್ರೆ ಎಲ್ಲರ್ನೂ ಒದ್ದು ಒಳೀಕಾಕ್ತಾರೆ...' ಎಂಬ ಭಯವನ್ನೂ ಹುಟ್ಟುಹಾಕಿ ಹೋದ. ಆದರೆ ಯಾರಿಗೂ ಕೇರುಮಾಡದಂಥ ಮನಃಸ್ಥಿತಿಯನ್ನು ಆಗಲೇ ಆವಾಹಿಸಿಕೊಂಡುಬಿಟ್ಟಿದ್ದ ಯುವಕರು, 'ಯಾರು ಬರುತ್ತಾರೋ ಬರಲಿ, ಅವರನ್ನು ತಮ್ಮ ಊರಿನಲ್ಲಿ ನಾಲ್ಕು ದಿನ ಕೂಡಿಹಾಕಿದರೆ ನಮ್ಮ ಕಷ್ಟ ಏನೆಂದು ಗೊತ್ತಾಗುತ್ತದೆ' ಎಂಬ ವಿತಂಡವಾದದಿಂದ ತಾವೇ ಬೋಟನ್ನು ಎಕ್ಕಾಪೆಕ್ಕ ನಡೆಸಿಕೊಂಡು ಹೋದರು.

ಸಣ್ಣತೆಪ್ಪದ ಬದಲು ದೊಡ್ಡ ಲಾಂಚು ಬಂದ ಸಂಭ್ರಮದಲ್ಲಿ ಊರೆಲ್ಲೆಲ್ಲ ಹಬ್ಬದಂಥ ವಾತಾವರಣ. ಆದರೇನು. ಆ ವಾತಾವರಣ ಬಹಳ ದಿನ ನಿಲ್ಲಲಿಲ್ಲ. ಆ ಬೋಟು ಯಾವಾಗಂದರೆ ಆವಾಗ, ಎಲ್ಲೆಂದರಲ್ಲಿ ನಿಂತುಬಿಡುತ್ತಿತ್ತು. ನಡುನೀರಿನಲ್ಲಿ ನಿಂತಾಗೆಲ್ಲ ಅದನ್ನು ಈಜುಪಟುಗಳಂತೆ ನೀರೊಳಕ್ಕೆ ಇಳಿದು ಹಗ್ಗ ಕಟ್ಟಿ ಆ ಕಡೆಗೋ ಈ ಕಡೆಗೋ ಎಳೆದುತಂದು ಒಳಗಿದ್ದವರನ್ನು, ಅದರೊಳಗಿನ ಸಾಮಾನುಗಳನ್ನು ರಕ್ಷಿಸುವ ವೇಳೆಗೆ ಇದರ ಸಹವಾಸವೇ ಸಾಕೆನ್ನಿಸಿಬಿಡುವಂತಾಗಿ ಅದನ್ನೂ ಅಲ್ಲಿಗೇ ಕೈಬಿಟ್ಟರು.